# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 134

2) ಸದಸ್ಯರ ಹೆಸರು : ಡಾ|| ಉಮಾಶ್ರೀ (ನಾಮನಿರ್ದೇಶನ ಹೊಂದಿದವರು)

3) ಉತ್ತರಿಸಬೇಕಾದ ದಿನಾಂಕ : 05-03-2025

4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮೀನುಗಾರರಿಗೆ ವಸತಿ ಸೌಲಭ್ಯ ಕಲ್ಪಿಸಲು ಸರ್ಕಾರ ಚಿಂತಿಸಿದೆಯೇ; ಇದ್ದಲ್ಲಿ, ತೆಗೆದುಕೊಂಡ ಕ್ರಮಗಳೇನು; (ವಿವರ ನೀಡುವುದು) | ಹೌದು.<br>2024-25 ನೇ ಸಾಲಿನ ಆಯವ್ಯಯ ಭಾಷಣದಲ್ಲಿ 10000 ವಸತಿ ರಹಿತ ಮೀನುಗಾರರಿಗೆ ಸರ್ಕಾರದ ವಿವಿಧ ವಸತಿ ಯೋಜನೆಗಳಡಿ ಮನೆಗಳನ್ನು ನಿರ್ಮಿಸಲು ಸಹಾಯಧನ ನೀಡಲಾಗುವುದು ಎಂದು ಘೋಷಿಸಲಾಗಿದೆ. |
| ಆ) | ಮತ್ಸ್ಯಾಶ್ರಯ ಯೋಜನೆಗೆ ಎಷ್ಟು ಅನುದಾನ ನಿಗಧಿ ಮಾಡಲಾಗಿದೆ, ಇದುವರೆಗೂ ಈ ಯೋಜನೆಯಡಿ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ; ಒಂದು ಮನೆಗೆ ಎಷ್ಟು ಹಣ ನಿಗದಿಪಡಿಸಲಾಗಿದೆ?<br>(ಫಲಾನುಭವಿಗಳ ವಿವರ ನೀಡುವುದು) | 2022-23 ನೇ ಸಾಲಿನಲ್ಲಿ ಮತ್ಸ್ಯಾಶ್ರಯ ಯೋಜನೆಯಡಿ 5000 ಮನೆಗಳು ಹಂಚಿಕೆಯಾಗಿದ್ದು, 2951 ಮನೆಗಳನ್ನು ಅನುಮೋದಿಸಲಾಗಿರುತ್ತದೆ.<br>ಸದರಿ ಮನೆಗಳಿಗೆ ರೂ.6964.80 ಲಕ್ಷಗಳನ್ನು ನಿಗದಿ ಪಡಿಸಲಾಗಿದ್ದು, ರಾಜೀವ್ ಗಾಂಧಿ ವಸತಿ ನಿಗಮದಿಂದ 34.82 ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆ.<br>ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ ಪ್ರಸ್ತುತ ಸಾಮಾನ್ಯ ವರ್ಗಕ್ಕೆ ಸೇರಿದ ಫಲಾನುಭವಿಗಳಿಗೆ ರೂ.1.20 ಲಕ್ಷ, ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿ / ಪಂಗಡದ ಫಲಾನುಭವಿಗಳಿಗೆ ರೂ.1.75 ಲಕ್ಷ ಮತ್ತು ನಗರ ಪ್ರದೇಶದ ಪರಿಶಿಷ್ಟ ಜಾತಿ / ಪಂಗಡದ ಫಲಾನುಭವಿಗಳಿಗೆ ರೂ.2.00 ಲಕ್ಷ ಸಹಾಯಧನವನ್ನು ನೀಡಲಾಗುತ್ತಿದೆ.<br>ಅಲ್ಲದೇ, ಮತ್ಸ್ಯಾಶ್ರಯ ಯೋಜನೆಯ ಫಲಾನುಭವಿಗಳು ನರೇಗಾ ಯೋಜನೆಯಡಿ ಉದ್ಯೋಗ ಚೀಟಿ (Job Card) ಹೊಂದಿದ್ದರೆ ಅಕುಶಲ ಘಟಕ 90 ಮಾನವ ದಿನಗಳ ಕೂಲಿ ವೆಚ್ಚವನ್ನು ಹೆಚ್ಚುವರಿಯಾಗಿ ಆರ್ಥಿಕ ಸಹಾಯಧನ ಪಡೆಯಲು ಅವಕಾಶ ಕಲ್ಪಿಸಲಾಗಿದೆ.<br>ಅನುಮೋದಿಸಲಾದ ಫಲಾನುಭವಿಗಳ ಜಿಲ್ಲಾವಾರು ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |

ಸಂಖ್ಯೆ: ಪಸಂಮೀ ಇ-24 ಮೀಇಯೋ 2025

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ|| ಉಮಾಶ್ರೀ (ನಾಮನಿರ್ದೇಶನ ಹೊಂದಿದವರು)ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 134 ಕ್ಕೆ

### ಅನುಬಂಧ-1

### 2022-23 ನೇ ಸಾಲಿನಲ್ಲಿ ಮತ್ಸ್ಯಾಶ್ರಯ ಯೋಜನೆಯಡಿ ಜಿಲ್ಲಾವಾರು ಅನುಮೋದನೆಯಾಗಿರುವ ಮನೆಗಳ ವಿವರ

| ಕ್ರಮ ಸಂಖ್ಯೆ | ಜಿಲ್ಲೆ | ಅನುಮೊದನೆಯಾದ ಮನೆಗಳ ಸಂಖ್ಯೆ | | | |
|---|---|---|---|---|---|
| | | ಸಾಮಾನ್ಯ | ಪ.ಜಾತಿ | ಪ. ಪಂ | ಒಟ್ಟು |
| 1 | ಬೆಳಗಾವಿ | 288 | 53 | 13 | 354 |
| 2 | ಬಾಗಲಕೋಟೆ | 72 | 16 | 7 | 95 |
| 3 | ಬಿಜಾಪುರ | 47 | 9 | 3 | 59 |
| 4 | ಗುಲ್ಬರ್ಗಾ | 45 | 14 | 3 | 62 |
| 5 | ಯಾದಗಿರಿ | 4 | 1 | 0 | 5 |
| 6 | ಬೀದರ್ | 23 | 18 | 7 | 48 |
| 7 | ರಾಯಚೂರು | 4 | 1 | 0 | 5 |
| 8 | ಕೊಪ್ಪಳ | 116 | 28 | 10 | 154 |
| 9 | ಗದಗ | 16 | 6 | 3 | 25 |
| 10 | ಧಾರವಾಡ | 26 | 8 | 1 | 35 |
| 11 | ಉತ್ತರಕನ್ನಡ | 265 | 1 | 0 | 266 |
| 12 | ಹಾವೇರಿ | 76 | 14 | 5 | 95 |
| 13 | ವಿಜಯನಗರ | 91 | 31 | 8 | 130 |
| 14 | ಬಳ್ಳಾರಿ | 12 | 5 | 2 | 19 |
| 15 | ಚಿತ್ರದುರ್ಗ | 38 | 16 | 7 | 61 |
| 16 | ದಾವಣಗೆರೆ | 23 | 9 | 4 | 36 |
| 17 | ಶಿವಮೊಗ್ಗ | 38 | 13 | 3 | 54 |
| 18 | ಉಡುಪಿ | 415 | 13 | 2 | 430 |
| 19 | ಚಿಕ್ಕಮಗಳೂರು | 4 | 1 | 0 | 5 |
| 20 | ತುಮಕೂರು | 119 | 33 | 7 | 159 |
| 21 | ಚಿಕ್ಕಬಳ್ಳಾಪುರ | 36 | 6 | 4 | 46 |
| 22 | ಕೋಲಾರ | 91 | 38 | 3 | 132 |
| 23 | ಬೆಂಗಳೂರು (ನ) | 13 | 4 | 0 | 17 |
| 24 | ರಾಮನಗರ | 26 | 10 | 1 | 37 |
| 25 | ಮಂಡ್ಯ | 57 | 5 | 1 | 63 |
| 26 | ಹಾಸನ | 19 | 5 | 0 | 24 |
| 27 | ದಕ್ಷಿಣಕನ್ನಡ | 367 | 46 | 22 | 435 |
| 28 | ಕೊಡಗು | 38 | 5 | 5 | 48 |
| 29 | ಮೈಸೂರು | 13 | 6 | 4 | 23 |
| 30 | ಚಾಮರಾಜನಗರ | 19 | 1 | 2 | 22 |
| 31 | ಬೆಂಗಳೂರು ಗ್ರಾ | 5 | 2 | 0 | 7 |
| | **ಒಟ್ಟು** | **2406** | **418** | **127** | **2951** |